**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:04-12-2025**

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಿ ಡಿ 1 ಹಕ್ಕು ಖಲಾಸೆ ಪತ್ರ ನನ್ನ ತಾಯಿ, ಸಹೋದರರು ಮತ್ತು ಅನಿಲ್ ಕುಮಾರ ರವರ ನಡುವೆ ಆಗಿರುತ್ತದೆ. ನಿ ಡಿ 1 ಪತ್ರದಲ್ಲಿ ಜನಾರ್ಧನ ರವರ ಮಗ ಅನಿಲ್ ಕುಮಾರ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಪತ್ರದಲ್ಲಿ ನನ್ನ ತಾಯಿ ನಾಗಮ್ಮ ರವರು ಸಹಿ ಮಾಡಿರುತ್ತಾರೆ. ಸಾಕ್ಷಿಗೆ ನಿ ಡಿ 1 ತೋರಿಸಲಾಗಿ ಅದರಲ್ಲಿ ತನ್ನ ತಾಯಿಯ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ ಡಿ 1 ನ್ನು ಗಂಗೇಗೌಡ ಎಂಬ ವಕೀಲರು ಬರೆದಿರುತ್ತಾರೆ. ಅದರಲ್ಲಿ ಇರುವ ಬರವಣಿಗೆ ಅವರದ್ದೆ ಆಗಿರುತ್ತದೆ. ನಿ ಡಿ 1 ರಲ್ಲಿ ಅನಿಲ್ ಕುಮಾರ ಮತ್ತು ಪಾವನಾ ರವರ ಸಹಿ ಮಾತ್ರ ಇರುತ್ತದೆ ಎಂದರೆ ಸರಿ. ನಿ ಡಿ 1 ರಲ್ಲಿ ಆಸ್ತಿ ಪಡೆದವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರವೀಂದ್ರ, ವಸಂತಿ, ಲತಾ, ಕಲಾ ಕುಮಾರಿ, ಜಯಕುಮಾರ, ಗಿರೀಶ್ ಕುಮಾರ , ಗೀತಾ ಮತ್ತು ಕುಮಾರಿ ಮತ್ತು ನಾಗಮ್ಮ ರವರ ಸಹಿಗಳು ಸಾಕ್ಷಿದಾರರಾಗಿ ಸಹಿ ಮಾಡಿರುವಂತೆ ನಮೂದಿಸಿರುತ್ತಾರೆ ಎಂದರೆ ಸರಿ. ಸದರಿರವರ ಸಹಿಗಳು ಪ್ರತಿ ಹಾಳೆಯಲ್ಲಿ ಇರುವುದಿಲ್ಲ ಎಂದರೆ ಸರಿ.

ನಿ ಡಿ 1 ರಲ್ಲಿ ಜೆ ಅನಿಲ್ ಕುಮಾರ, ಪಾವನಾ ಮತ್ತು ಅದರಲ್ಲಿ ಬರೆದಿರುವ ಬರವಣಿಗೆಗಳು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಹಕ್ಕು ಖಲಾಸೆ ಪತ್ರ ನೋಂದಾಣಿ ಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 1 ರಲ್ಲಿ ಅನಿಲ್ ಕುಮಾರ ಮತ್ತು ಪಾವನಾ ರವರ ಪೋಟೋ ಇರುವುದಿಲ್ಲ ಎಂದರೆ ಸರಿ. ನಿಡಿ 1 ನ್ನು ಈ ದಾವೆಗಾಗಿ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 1 ಪತ್ರವನ್ನು ಬೇಲೂರಿನಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿ. ನನ್ನ ಸಹೋದರ ಅನಿಲ್ ಕುಮಾರ ಬೇಲೂರಿನಲ್ಲಿ ಇದ್ದುದರಿಂದ ಅಲ್ಲಿ ತಯಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ ಡಿ 1 ರಲ್ಲಿ ಬೇಲೂರಿನ ವಿಳಾಸ ನಮೂದಿಸಿಲ್ಲ ಎಂದರೆ ಸರಿ. ನಿ ಡಿ 1 ರಲ್ಲಿ ಇರುವ ಅಂಶಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೆಸರು ಮತ್ತು ವಿಳಾಸ ನಮೂದು ಮಾಡಿಲ್ಲ ಎಂದರೆ ಸರಿ. ಆದರೆ ಸಹಿಗಳು ಇರುತ್ತದೆ.

ದಿ: 07.05.2003 ರಂದು ನಿ ಡಿ 2 ರಂತೆ ಹಿಸ್ಸಾ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿ ಡಿ 1 ಹಕ್ಕು ಖಲಾಸೆ ಪತ್ರ ಮಾಡಿಕೊಟ್ಟಿದ್ದರ ಬಾಬ್ತು ನಿಡಿ 2 ವಿಭಾಗ ಪತ್ರ

ಮಾಡಿಕೊಂಡಿರುತ್ತೇವೆ. ನಿ ಡಿ 2 ನೋಂದಾಣಿಯಾಗಿಲ್ಲ ಎಂದರೆ ಸರಿಯಲ್ಲ. ನಿ ಡಿ 2 ರಲ್ಲಿ ಅನಿಲ್ ಕುಮಾರ ಬಿನ್ ಜನಾರ್ಧನ್ ಎಂದು ನಮೂದಿಸಿದ್ದು ಯಾವುದೇ ಇನಿಶಿಯಲ್ ಹಾಕಿಲ್ಲ ಎಂದರೆ ಸರಿ. ನಿ ಡಿ 2 ರಲ್ಲಿ ನಾಗಮ್ಮ ರವರ ಹೆಸರಿನ ಮುಂದೆ ದಾನ ಕೊಡುವವರು ಎಂದು ಬರೆದಿದ್ದು ಯಾವ ಕಾರಣಕ್ಕಾಗಿ ಬರೆದಿರುತ್ತಾರೆ ಎಂದು ಗೊತ್ತಿಲ್ಲ. ನಿಡಿ 2 ವಿಭಾಗ ನನ್ನ ತಾಯಿ ಅನಿಲ್ ರವರಿಗೆ ಕೊಟ್ಟ ಹಿಸ್ಸೆಯಾಗಿರುತ್ತದೆ. ಎಷ್ಟು ಅಳತೆಯ ಜಾಗವನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ.

ನಿ ಡಿ 2 ರಲ್ಲಿ ಅನಿಲ್ ಕುಮಾರ ರವರ ಸಹಿ ಮೊದಲನೇ ಮತ್ತು ಎರಡನೇ ಹಾಳೆಯಲ್ಲಿ ಇರುವುದಿಲ್ಲ. ಅದರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ನನ್ನ ತಾಯಿಯದ್ದು ಇರುತ್ತದೆ. ಅದರಲ್ಲಿ ನನ್ನ ತಾಯಿಯ ಹೆಸರು ನಮೂದು ಮಾಡಿಲ್ಲ ಎಂದರೆ ಸರಿ. ನಿ ಡಿ 2 ರ 3 ನೇ ಹಾಳೆಯಲ್ಲಿ ಹಿಸ್ಸೆ ಕೊಟ್ಟವರ ಹೆಬ್ಬೆಟ್ಟಿನ ಗುರುತು ಹಾಕಿದ ನಂತರ ಮುಂದುವರೆದು ಬರೆದಿರುತ್ತಾರೆ ಎಂದರೆ ಸರಿ. ಅದು ಯಾವ ಉದ್ದೇಶಕ್ಕೆ ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಅನಿಲ್ ಕುಮಾರು ರವರು ಸಹಿ ಮಾಡಿದ ನಂತರ ದಿನಾಂಕ ನಮೂದು ಮಾಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿ ಡಿ 1 ರಲ್ಲಿ ಅನಿಲ್ ಕುಮಾರ ಸಹಿ ಮಾಡಿದ ನಂತರ ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿ. ನಿ ಡಿ 2 ರಲ್ಲಿ ಸಾಕ್ಷಿದಾರರು ಎಲ್ಲ ನನ್ನ ಸಹೋದರಾರರು ಎಂದರೆ ಸರಿ. ಬೇರೆ ವ್ಯಕ್ತಿಗಳ ಸಾಕ್ಷಿ ಸಹಿ ಪಡೆಯಲು ತೊಂದರೆ ಇರಲಿಲ್ಲ.

ನಿಡಿ 2 ನ್ನು ಗಂಗೇಗೌಡ ವಕೀಲರು ಬರೆದಿರುತ್ತಾರೆ. ಅವರ ಸೀಲ್ ಮತ್ತು ಸಹಿ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿ ಡಿ 2 ಹಿಸ್ಸಾ ಪತ್ರವಾದ ಮರುದಿನ ನಿ ಡಿ 3 ಕ್ರಯ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಗೊತ್ತಿಲ್ಲ. ನಿ ಡಿ 3 ಕ್ರಯ ಪತ್ರದಲ್ಲಿ ಇರುವ ಎ ಆರ್ ಸದಾನಂದ ಬಿನ್ ರಾಮಣ್ಣ ಎಂದರೆ ನನ್ನ ಭಾವ ಇರುತ್ತಾರೆ. ಅನಿಲ್ ಕುಮಾರ ರವರು ಅವರಿಗೆ ಕ್ರಯ ಮಾಡಿರುತ್ತಾರೆ. ನಿ ಡಿ 3 ನೋಂದಣಿಯಾಗಿಲ್ಲ ಎಂದರೆ ಗೊತ್ತಿಲ್ಲ. ನಿ ಡಿ 3 ಕ್ರಯ ಪತ್ರ ಮಾಡುವ ಕಾಲಕ್ಕೆ ಅನಿಲ್ ಕುಮಾರ ರವರಿಗೆ ಸ ನಂ 68/3 ರಲ್ಲಿನ 2 ಗುಂಟೆ ಕಾಫಿ ಜಮೀನು ಬಂದಿತ್ತು. ಅವರ ಹೆಸರಿಗೆ ಖಾತೆ ಬದಲಾಣೆಯಾಗಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿರುತ್ತೇನೆ. ನಿ ಡಿ 3 ರ 1 ಮತ್ತು 2 ನೇ ಹಾಳೆಯಲ್ಲಿ ಅನಿಲ್ ಕುಮಾರ ರವರ ಸಹಿ ಇಂಗ್ಲಿಷ ನಲ್ಲಿ ಇರುತ್ತದೆ ಎಂದರೆ ಸರಿ. ಅದರಲ್ಲಿ ಇನಿಶಿಯಲ್ ಇಲ್ಲ ಎಂದರೆ ಸರಿ. ನಿ ಡಿ 3 ರ 2 ಮತ್ತು 3ನೇ ಹಾಳೆಯಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಅನಿಲ್ ಕುಮಾರ ರವರದ್ದು ಇರಬಹುದು ನನಗೆ ಗೊತ್ತಿಲ್ಲ. ನಿ ಡಿ 3 ರ ಕೊನೆಯ ಪುಟದಲ್ಲಿ ಅನಿಲ್ ಕುಮಾರ ರವರ ಸಹಿ ಕನ್ನಡದಲ್ಲಿ ಇದೆ ಎಂದರೆ ಸರಿ. ಅದರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಅವರದ್ದೆ ಇರುತ್ತದೆ.

ಹೆಬ್ಬೆಟ್ಟಿನ ಗುರುತು ಇರುವ ಸ್ಥಳದಲ್ಲಿ ಅನಿಲ್ ಕುಮಾರ ರವರ ಹೆಸರು ಇರುವುದಿಲ್ಲ ಎಂದರೆ ಸರಿ. ಅದಕ್ಕೆ ಸಾಕ್ಷಿದಾರರಾಗಿ ನಾನು ಮತ್ತು ನನ್ನ ಭಾವ ಮಾಡಿರುತ್ತೇವೆ.

ನಿ ಡಿ 3 ರಲ್ಲಿ ಸದಾನಂದ ರವರ ಸಹಿ ಇರುವುದಿಲ್ಲ ಎಂದರೆ ಸರಿ. ನಿ ಡಿ 3 ಕ್ರಯ ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ಗೊತ್ತಿಲ್ಲ. ನಿಡಿ 3 ನ್ನು ಯಾರು ಎಲ್ಲಿ ಬರೆದಿರುತ್ತಾರೆ ಎಂದು ನಮೂದು ಇಲ್ಲ ಎಂದರೆ ಗೊತ್ತಿಲ್ಲ. ನಿಡಿ 1 ರಿಂದ 3ನ್ನು ಈ ಕೇಸ ಗಾಗಿ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪತ್ರ ಬರಹಗಾರರ ಸಹಿ ಮತ್ತು ವಿಳಾಸ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿ ಡಿ 1 ರಿಂದ 3 ರ ವಿಚಾರಗಳು ನನಗೆ ಗೊತ್ತಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**